ಕವಿತೆ



ಮಂಜುನಾಥ್ ಲತಾ

ಕಲೆ: ಜಬೀವುಲ್ಲಾ ಎಂ. ಅಸದ್

# ದೇವರಂತಹ ನಗು



ಸಾಲವಾಗಿ ತಂದಿಟ್ಟುಕೊಂಡು
ಕೊಳೆಯುತ್ತಿರುವ
ನಿಮ್ಮ ಸೃಜನಶೀಲ ಪುಳಕಗಳನ್ನೆಲ್ಲ
ಅರೆಹೊತ್ತು ಆರಲು ಬಿಡಿ;
ಒಣಗಿ ನಿಂತ ಈ ಬೀದಿಗಳಲ್ಲಿ.
ಬಿಸಿಲಿಗೆ ಹಸಿವಾಗುತ್ತಿದ್ದರೂ
ನಿಮ್ಮೀ ಪುಳಕಗಳನ್ನೆಲ್ಲ ಒಣಗಿಸಲು ತಯಾರಿದೆ.

ಇತ್ತಿತ್ತಲಾಗಿ ದಾರಿ ಮಾಡಿಕೊಂಡು ಬಂದರೆ
ನಿಮಗೆ ಕಟ್ಟಿರುವ ಗುಡಿ ಕಾಣುವುದು;
ಅಲ್ಲಿ ನೀವಿರುವಿರಿ.

ಗುಲಗಂಜಿ ಭಾರದ
ನಿಮ್ಮೊಳಗಿನ ಕರುಣೆ
ಈ ಕ್ಷಣದಲ್ಲಾದರೂ ಕರಗಿ
ಈ ಚರಂಡಿಯಲ್ಲಿ ಹರಿಯಲಿ
ಈ ಹಟ್ಟಿಗಳ ಕಣ್ಣೀರೊಂದಿಗೆ.

ನಿಮ್ಮ ತೀರ್ಥಪ್ರಸಾದದಂತಹ
ನಗು ಕೂಡ
ಇಲ್ಲಿನ ಈ ಮಕ್ಕಳ ಪಾಲಿಗೆ
ನೈವೇದ್ಯದಂತೆ ಕಾಣುತ್ತಿದೆ.
ಗರ್ಭಗುಡಿಯ ಕತ್ತಲ ಮೂಲೆಯಲ್ಲಿ
ಎಲ್ಲೋ ರೊಟ್ಟಿ ತುಣುಕಿನಂತೆ ಹೊಳೆಯುತ್ತಿದೆ
ನಿಮ್ಮ ಆ ನಗು.

ಹಾಗಾಗಿ
ನೀವು ಸದಾ ಮಂದಸ್ಮಿತ ದೇವರೆಂದು
ನಂಬಿವೆ ಮಕ್ಕಳು.

ಈ ಒಂದು ಮಂದಹಾಸ
ಒಂದು ರೊಟ್ಟಿಯನ್ನಾದರೂ
ದಯಪಾಲಿಸಿದರೆ
ಹಂಚಿಕೊಂಡು ತಿನ್ನಬಹುದೆಂದು
ಧ್ಯಾನಿಸುತ್ತಿವೆ ಅವು.

